# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:23/08/2022 ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಾರ್ಯದರ್ಶಿ.
3. ಶ್ರೀ. ಮೂರ್ತಿ, ಸಹಾಯಕ ಅಭಿಯಂತರರು, ವಿದ್ಯುತ್–ದಕ್ಷಿಣ.
4. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–153
5. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
6. ಶ್ರೀ. ವಿಜಯ್‌ಕುಮಾರ್ ಕೆ.ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
7. ಶ್ರೀ. ಪ್ರವೀಣ್ ಶೆಟ್ಟಿ, ಪಿ.ಎಸ್.ಐ ತಿಲಕ್‌ನಗರ ಪೋಲೀಸ್ ಠಾಣೆ.
8. ಶ್ರೀ. ಪುಟ್ಟೇಗೌಡ ಪಿ.ಎಸ್.ಐ ಮೈಕೋಲೇಔಟ್ ಪೋಲೀಸ್ ಠಾಣೆ.
9. ಶ್ರೀ. ಮಾಲಪ್ಪ ಪಿ.ಸಿ ಮೈಕೋಲೇಔಟ್ ಪೋಲೀಸ್ ಠಾಣೆ.
10. ಶ್ರೀ. ಬಸವರಾಜು ಪಿ.ಸಿ. ಮೈಕೋಲೇಔಟ್ ಪೋಲೀಸ್ ಠಾಣೆ.
11. ವಾರ್ಡ್ ಸಂಖ್ಯೆ: 153ರ ಸ್ಥಳೀಯರಾದ ಶ್ರೀ. ಫಜಲ್ ಖಾನ್, ಶ್ರೀ. ಜಯಕೃಷ್ಣ, ಶ್ರೀ. ಡಿ. ಕಾಂತರಾಜನ್, ಶ್ರೀ. ಶ್ರೀನಿವಾಸಮೂರ್ತಿ ಎಸ್, ಡಾ॥ ರಘುನಾಥ್, ಶ್ರೀ. ಬಾಬು, ಶ್ರೀ. ಅನೀಸ್ ಅಹಮದ್,

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಅರಣ್ಯ ಇಲಾಖೆಯ ಅಧಿಕಾರಿಗಳು.
2. ಪೋಲೀಸ್ ಇನ್ಸ್‌ಪೆಕ್ಟರ್ ಬಸವನಗುಡಿ ಸಂಚಾರ ಪೋಲೀಸ್ ಠಾಣೆ.
3. ಪೋಲೀಸ್ ಇನ್ಸ್‌ಪೆಕ್ಟರ್ ಜಯನಗರ ಸಂಚಾರ ಪೋಲೀಸ್ ಠಾಣೆ.
4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಯ ಅಧಿಕಾರಿಗಳು.
5. ಬೆಸ್ಕಾಂ ಇಲಾಖೆಯ ಅಧಿಕಾರಿಗಳು
6. ಪೋಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ತಿಲಕ್‌ನಗರ ಮತ್ತು ಬಸವನಗುಡಿ ಕಾನೂನು ಸುವ್ಯವಸ್ಥೆ.

*********



Scanned with CamScanner

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:23/08/2022 ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಕಾರ್ಯದರ್ಶಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಅದರಂತೆ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು.

3. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್‌ನ 10ನೇ "ಡಿ" ಮತ್ತು 10ನೇ "ಸಿ" ಮುಖ್ಯರಸ್ತೆಗಳಿಗೆ ಡಾಂಬರು ಹಾಕುವ ಕಾಮಗಾರಿಯ ಪ್ರಗತಿಯ ಬಗ್ಗೆ ವಿಚಾರಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಈಗಾಗಲೇ ಪಸ್ತಾಪಿತ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ. ಸದರಿ ಅಂದಾಜು ಪಟ್ಟಿಯ ಅನುಮೋದನೆ ಪಡೆದು ಕಾರ್ಯಾದೇಶ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕ್ರಮ: ವಾರ್ಡ್ ಅಭಿಯಂತರರು

4. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಅಶೋಕ ಪಿಲ್ಲರ್ ಬಳಿಯ ರಸ್ತೆಯಲ್ಲಿ ಸರಿಯಾಗಿ ಕಸ ಗುಡಿಸುತ್ತಿಲ್ಲದಿರುವುದರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರನ್ನು ವಿಚಾರಿಸಿದರು. ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸದರಿ ರಸ್ತೆಯಲ್ಲಿ ಕಸ ಗುಡಿಸುತ್ತಿರುವ ಪೌರಕಾರ್ಮಿಕರಿಗೆ ಈ ಬಗ್ಗೆ ಸೂಚನೆಯನ್ನು ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು

5. ವಾರ್ಡಿನ ಸ್ಥಳೀಯರಾದ ಶ್ರೀ. ಜಯಕೃಷ್ಣ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಮುಖ್ಯರಸ್ತೆ ಫ್ಯಾಮಿಲಿ ಮಾರ್ಟ್ ಬಳಿ ಕಸವನ್ನು ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ರಸ್ತೆಯಲ್ಲಿ ಸರಿಯಾಗಿ ಕಸ ವಿಲೇವಾರಿ ಮಾಡುವಂತೆ ತಿಳಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು.



Scanned with CamScanner

6. ವಾರ್ಡಿನ ಸ್ಥಳೀಯರಾದ ಶ್ರೀ. ಜಯಕೃಷ್ಣ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ಗಾಡಿಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಸಮಸ್ಯೆಯನ್ನು ಕೂಡಲೇ ಬಗೆ ಹರಿಸುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರು ಮಾತನಾಡಿ ಶ್ರೀ. ಪುಟ್ಟೇಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರೊಂದಿಗೆ ಮಾತನಾಡಿ ಸದರಿ ರಸ್ತೆಯಲ್ಲಿ ನಿಲ್ಲಿಸುತ್ತಿರುವ ವಾಹನಗಳಿಗೆ ಲಾಕ್‌ಅನ್ನು ಹಾಕಿ ದಂಡ ಹಾಕುವಂತೆ ಕೋರಿದರು. ಈ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಮಾತನಾಡಿ ನಮ್ಮ ಬಳಿ ಲಾಕ್‌ಗಳ ಕೊರತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಬಿ.ಹೆಚ್.ಇ.ಎಲ್ ಲೇಔಟ್ ವೆಲ್‌ಫೇರ್ ಅಸೋಸಿಯೇಷನ್ ಸೆಕ್ರೆಟರಿ ರವರು ಮಾತನಾಡಿ ನಮ್ಮ ವೆಲ್‌ಫೇರ್ ವತಿಯಿಂದ ಲಾಕ್‌ಗಳನ್ನು ಒದಗಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ರವರು ಮಾತನಾಡಿ ಲಾಕ್‌ಗಳನ್ನು ಒದಗಿಸಿದ್ದಲ್ಲಿ ಈ ಬಗ್ಗೆ ಮುಂದಿನ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**ಕ್ರಮ : ಪೊಲೀಸ್ ಇನ್ಸ್‌ಪೆಕ್ಟರ್ ಮೈಕೋಲೇಔಟ್ ಸಂಚಾರಿ ಪೊ.ಠಾ.**

7. ವಾರ್ಡಿನ ಸ್ಥಳೀಯರಾದ ಶ್ರೀ. ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, ಇವುಗಳನ್ನು ಹಿಡಿಯಲು ಬರುವ ಇಲಾಖೆ ವತಿಯಿಂದ ನಾಯಿ ಹಿಡಿಯಲು ಬಳಸುವ ಜಾಲರಾವನ್ನು ನಮಗೆ ಒದಗಿಸಿದ್ದಲ್ಲಿ ನಾವೇ ಬೀದಿ ನಾಯಿಗಳನ್ನು ಹಿಡಿದು ತಮ್ಮ ವಶಕ್ಕೆ ಒಪ್ಪಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. ಹಾಗೂ ಬಿಬಿಎಂಪಿ ವತಿಯಿಂದ ಜಾಗ ನೀಡಿದ್ದಲ್ಲಿ ಸದರಿ ಬೀದಿ ನಾಯಿಗಳನ್ನು ಹಿಡಿದು ಶೆಡ್‌ಗಳಲ್ಲಿ ಕೂಡಿ ಹಾಕುವ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳ ದೂರವಾಣಿ ಸಂಖ್ಯೆ ನೀಡಲಾಗುವುದು ತಾವುಗಳು ಸದರಿ ಅಧಿಕಾರಿಗಳೊಂದಿಗೆ ಚರ್ಚಿಸಿ ತಮಗೆ ಅವಶ್ಯಕತೆ ಇರುವ ವಸ್ತುಗಳ ಬಗ್ಗೆ ಸದರಿಯವರಿಂದ ಪಡೆದುಕೊಳ್ಳುವಂತೆ ತಿಳಿಸಿದರು.

8. ವಾರ್ಡಿನ ಸ್ಥಳೀಯರಾದ ಶ್ರೀ. ಫಜಲ್ ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಮುಖ್ಯರಸ್ತೆಯಲ್ಲಿ ಮತ್ತು ಫ್ಯಾಮಿಲಿ ಮಾರ್ಟ್ ಬಳಿ ತಳ್ಳುವ ಗಾಡಿಯಲ್ಲಿ ಹಣ್ಣುಗಳನ್ನು ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಹಾಗೂ ಸದರಿ ತಳ್ಳುವ ಗಾಡಿಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಕಿ.ಆ.ಪ ಹಾಗೂ ಕೆಲಸ ಪರಿವೀಕ್ಷಕರುಗಳಿಗೆ ತಳ್ಳುವ ಗಾಡಿಗಳನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ತಿಳಿಸಿದರು.

**ಕ್ರಮ: ಕಿ.ಆ.ಪ ಹಾಗೂ ಕೆಲಸ ಪರಿವೀಕ್ಷಕರು**



Scanned with CamScanner

9. ವಾರ್ಡ್ ಅಭಿಯಂತರರು ಮಾತನಾಡಿ ಬೀದಿ ದೀಪಗಳ ಬಗ್ಗೆ ಯಾವುದಾದರೂ ಸಮಸ್ಯೆ ಇದ್ದಲ್ಲಿ ತಿಳಿಸುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ವಾರ್ಡಿನ ಸ್ಥಳೀಯರಾದ ಶ್ರೀ.ಫಜಲ್ ಖಾನ್ ರವರು ಮಾತನಾಡಿ ಶ್ರೀ. ಮೂರ್ತಿ ರವರು ಬೀದಿ ದೀಪಗಳ ದುರಸ್ಥಿಯನ್ನು ಮಾಡಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

| | |
|---|---|
| (ನವೀನ್‌ಕುಮಾರ್ ಕೆ.) | (ವರಲಕ್ಷ್ಮಮ್ಮ ಎಲ್) 23/8/22 |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-153 ಜಯನಗರ | ವಾರ್ಡ್-153 ಜಯನಗರ |



Scanned with CamScanner